## ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1994.

### ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ –I**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು.

**ಅಧ್ಯಾಯ –II**

3. ಮಂಡಲಿಯ ರಚನೆ.
4. ಪದಾವಧಿ ಮತ್ತು ಸೇವಾ ಷರತ್ತುಗಳು.
5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.
6. ಸದಸ್ಯನನ್ನು ತೆಗೆದುಹಾಕುವುದು.
7. ಕಾರ್ಯದರ್ಶಿ.
8. ಮಂಡಲಿಯ ಸಭೆಗಳು.
9. ವ್ಯವಹರಣೆಗಳು ಸರಿಯಾದುವೆಂದು ಮತ್ತು ಊರ್ಜಿತವಾದುವೆಂದು ಪೂರ್ವ ಭಾವನೆ ಮಾಡುವುದು.
10. ಅನುಷ್ಠಾನ ಸಮಿತಿ.
11. ಅನುಷ್ಠಾನ ಸಮಿತಿಯ ಅಧಿಕಾರಗಳು.

**ಅಧ್ಯಾಯ –III**

12. ಮಂಡಲಿಯ ಉದ್ದೇಶಗಳು.
13. ಯೋಜನೆಯ ಸಿದ್ಧತೆ ಮತ್ತು ಸ್ಕೀಮುಗಳ ಅನುಮೋದನೆ.
14. ಉಸ್ತುವಾರಿ.
15. ಸಮನ್ವಯ.
16. ಯೋಜನೆಗಳ ಅನುಷ್ಠಾನ.
17. ಮಾಹಿತಿಯನ್ನು ಪಡೆಯುವುದು.
18. ಅಧಿಕಾರದ ಪ್ರತ್ಯಾಯೋಜನೆ.

**ಅಧ್ಯಾಯ –IV**

19. ಮಂಡಲಿಯ ನಿಧಿ.
20. ನಿಧಿಯ ವಿನಿಯೋಗ.
21. ಯೋಜನೆಯಲ್ಲಿ ಹಂಚಿಕೆ.
22. ರಾಜ್ಯ ಸರ್ಕಾರದಿಂದ ಅನುದಾನ
23. ಸಾಲ ಪಡೆಯಲು ಅಧಿಕಾರ.
24. ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ.
25. ವರದಿ.
26. ಮಂಡಲಿಯ ಆಯವ್ಯಯ ಪತ್ರ.

27. ಮಂಡಲಿಗೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.

28. ನಿಯಮಗಳ ರಚನಾಧಿಕಾರ.

29. ವಿನಿಯಮಗಳನ್ನು ರಚಿಸಲು ಮಂಡಲಿಗೆ ಅಧಿಕಾರ.

ಅನುಸೂಚಿ.

* * * *

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**I**

**1994ರ ಅಧಿನಿಯಮ ಸಂಖ್ಯೆ 38.–** ಬಯಲು ಸೀಮೆ ಅಭಿವೃದ್ಧಿಯ ಪ್ರದೇಶವು ವಿಶೇಷ ಸಮಸ್ಯೆಗಳನ್ನು ಉಂಟುಮಾಡಿರುವ, ಕ್ಷಾಮ ಪೀಡಿತ ತಾಲ್ಲೂಕುಗಳೆಂದು ಗುರುತಿಸಲಾಗಿರುವ ರಾಜ್ಯದ ಐವತ್ತಾರು ತಾಲ್ಲೂಕುಗಳನ್ನು ಒಳಗೊಂಡಿದೆ.

ಈ ಪ್ರದೇಶವನ್ನು ರಾಜ್ಯದ ಇತರ ಭಾಗದ ಮಟ್ಟಕ್ಕೆ ತರುವುದಕ್ಕಾಗಿ, ಈ ಪ್ರದೇಶದ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸುವ ಉದ್ದೇಶಕ್ಕಾಗಿ ಸಮಗ್ರ ಕಾನೂನನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಯಿತು. ಅದು ಇತರ ವಿಷಯಗಳ ಜೊತೆಗೆ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸುತ್ತದೆ:–

(i) ಈ ಮುಂದಿನ ವಿಷಯಗಳ ಬಗ್ಗೆ ಜವಾಬ್ದಾರಿಯನ್ನು ಹೊಂದಿರುವ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿಯೊಂದನ್ನು ಸ್ಥಾಪಿಸುವುದು.–

(ಎ) ಜಲಸಂಪನ್ಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆ;

(ಬಿ) ಮಳೆ ಆಧಾರಿತ ಕೃಷಿ ಪದ್ಧತಿಗಳಲ್ಲಿ ಮತ್ತು ಅರಣ್ಯಾಭಿವೃದ್ಧಿಯಲ್ಲಿ ಭೂಸಾರ ಮತ್ತು ಜಲ ಸಂರಕ್ಷಣ ಕ್ರಮಗಳನ್ನು ಅಳವಡಿಸುವುದು;

(ಸಿ) ತೋಟಗಾರಿಕೆ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು;

(ಡಿ) ಪಶುಸಂಗೋಪನೆಗೆ ಉತ್ತೇಜನ ನೀಡುವುದು;

(ಇ) ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ವಲಯಗಳಲ್ಲಿನ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು; ಮತ್ತು ಅವುಗಳಿಗೆ ಬೆಂಬಲ ನೀಡುವುದು.

(ii) ಅನುಷ್ಠಾನ ಸಮಿತಿ ರಚನೆ;

(iii) ಬಯಲು ಸೀಮೆಗಾಗಿ ಒಂದು ಯೋಜನೆಯನ್ನು ಸಿದ್ಧಪಡಿಸಲು ಮತ್ತು ಯೋಜನೆಯ ಅಡಿಯಲ್ಲಿ ಸ್ಕೀಮ್‌ನ್ನು ಕಾರ್ಯಗತಗೊಳಿಸುವುದರ ಮೇಲ್ವಿಚಾರಣೆ ನಡೆಸಲು ಮತ್ತು ಎಲ್ಲ ಇಲಾಖೆಗಳ ಮತ್ತು ಜಿಲ್ಲಾ ಪರಿಷತ್ತುಗಳ ಮತ್ತು ಬಯಲು ಸೀಮೆಯಲ್ಲಿನ ಇತರ ಸರ್ಕಾರೇತರ ಸಂಘಗಳ ಕಾರ್ಯವನ್ನು ಸಮನ್ವಯಗೊಳಿಸುವುದು;

(iv) ಮಂಡಲಿಗೆ ರಾಜ್ಯ ಯೋಜನೆಯಡಿಯಲ್ಲಿ ಹಣಕಾಸು ಹಂಚಿಕೆಯನ್ನು ಏರ್ಪಾಡು ಮಾಡುವುದು.

ಕೆಲವು ಅನುಷಂಗಿಕ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ ಭಾಗ-೪ಗಿ ಸೆಕ್ಷನ್ 2 ಎ (ವಿಶೇಷ ಪತ್ರಿಕೆ) ಸಂಖ್ಯೆ 722 ದಿನಾಂಕ: ೦2-೦9-1994 ರಲ್ಲಿ ಪ್ರಕಟಗೊಂಡಿದೆ.)

**II**

**2000ದ ತಿದ್ದುಪಡಿ ಅಧಿನಿಯಮ ಸಂಖ್ಯೆ 16.–** (i) ರೆವಿನ್ಯೂ ಜಿಲ್ಲೆಗಳ ಪುನರ್ ರಚನೆಯಿಂದಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಬರುವ ತಾಲ್ಲೂಕುಗಳನ್ನು ನಿರ್ದಿಷ್ಟಪಡಿಸುವ ಅನುಸೂಚಿಯನ್ನು ಪರಿಷ್ಕರಿಸುವುದಕ್ಕಾಗಿ; ಮತ್ತು

(ii) ಮಂಡಳಿಯ ಅಧ್ಯಕ್ಷರ ಹುದ್ದೆಯ ಖಾಲಿ ಇರುವಾಗ, ಮಂಡಳಿಯ ಪರಿಣಾಮಕಾರಿಯಾದ ಕಾರ್ಯನಿರ್ವಹಣೆಗಾಗಿ ಮಂಡಳಿಯ ಸಭೆಯನ್ನು ನಡೆಸಲು ಮಂಡಲಿಯ ಕಾರ್ಯದರ್ಶಿಯವರಿಗೆ ಅಧಿಕಾರ ನೀಡುವುದಕ್ಕಾಗಿ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1994ನ್ನು (1994ರ ಕರ್ನಾಟಕ ಅಧಿನಿಯಮ ಸಂಖ್ಯೆ 38) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ರ ವಿಧಾನಸಭಾ ವಿಧೇಯಕ ಸಂಖ್ಯೆ 3ರಲ್ಲಿದ್ದಂತೆ)

## 1994ರ ಕರ್ನಾಟಕ ಅಧಿನಿಯಮ ಸಂಖ್ಯೆ 38

*(1994ರ ಅಕ್ಟೋಬರ್ ಏಳನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1994

*(1994ರ ಅಕ್ಟೋಬರ್ ಆರನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

(2000ದ 16ನೇ ಅಧಿನಿಯಮದಲ್ಲಿ ತಿದ್ದುಪಡಿಯಾದಂತೆ)

ಬಯಲುಸೀಮೆ ಪ್ರದೇಶಕ್ಕಾಗಿ, ಬಯಲುಸೀಮೆ ಪ್ರದೇಶದ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ, ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ನೋಡಿಕೊಳ್ಳುವ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಮತ್ತು ಅದರ ಮೌಲ್ಯ ನಿರ್ಧರಿಸುವ ಒಂದು ಅಭಿವೃದ್ಧಿ ಮಂಡಲಿಯ ಸ್ಥಾಪನೆಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಬಯಲುಸೀಮೆ ಪ್ರದೇಶಕ್ಕಾಗಿ, ಬಯಲುಸೀಮೆ ಪ್ರದೇಶದ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ; ಯೋಜನೆಗಳ ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ನೋಡಿಕೊಳ್ಳುವ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಮತ್ತು ಅದರ ಮೌಲ್ಯ ನಿರ್ಧರಿಸುವ ಒಂದು ಅಭಿವೃದ್ಧಿ ಮಂಡಲಿಯ ಸ್ಥಾಪನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

### ಅಧ್ಯಾಯ I

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1994 ಎಂದು ಕರೆಯತಕ್ಕದ್ದು.

(2) ಇದರ ವ್ಯಾಪ್ತಿಯು ಇಡೀ ಬಯಲುಸೀಮೆ ಪ್ರದೇಶಕ್ಕೆ ಇರತಕ್ಕದ್ದು.

(3) ಇದು, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಈ ಅಧಿನಿಯಮವು ದಿನಾಂಕ 26.1.1995ರಂದು ಅಧಿಸೂಚನೆಯು ಮೂಲಕ ಜಾರಿಗೆ ಬಂದಿರುತ್ತದೆ. ಅಧಿಸೂಚನೆ ಪ್ರತಿಯನ್ನು ಕೊನೆಯು ಪುಟದಲ್ಲಿ ನೋಡಬಹುದು.

**2. ಪರಿಭಾಷೆಗಳು.-**ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಬಯಲುಸೀಮೆ" ಎಂದರೆ, ಅಧಿನಿಯಮಕ್ಕೆ ಲಗತ್ತಿಸಿರುವ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಪ್ರದೇಶ;

(ಬಿ) "ಮಂಡಲಿ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ;

(ಸಿ) "ಅಧ್ಯಕ್ಷ" ಎಂದರೆ ಮಂಡಲಿಯ ಅಧ್ಯಕ್ಷ;

(ಡಿ) "ಅಭಿವೃದ್ಧಿ ಇಲಾಖೆ " ಎಂದರೆ, ಪೊಲೀಸ್ ಮತ್ತು ನ್ಯಾಯಿಕ ಇಲಾಖೆಗಳನ್ನು ಹೊರತುಪಡಿಸಿ ಬಯಲುಸೀಮೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ರಾಜ್ಯ ಸರ್ಕಾರದಿಂದ ಅಥವಾ ಇತರ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಯಾವುದೇ ನಿಕಾಯ ಅಥವಾ ನಿಗಮವು ಸೇರಿದಂತೆ ಆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು;

(ಇ) "ಅನುಷ್ಠಾನ ಸಮಿತಿ" ಎಂದರೆ 10ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಅನುಷ್ಠಾನ ಸಮಿತಿ;

(ಎಫ್) "ಸದಸ್ಯ" ಎಂದರೆ, ಮಂಡಲಿಯ ಸದಸ್ಯ :

(ಜಿ) "ಯೋಜನೆ" ಎಂದರೆ, ಜಿಲ್ಲಾ ಪಂಚಾಯತ್ ಜಿಲ್ಲಾ ಯೋಜನೆಯನ್ನು ಮತ್ತು ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಯನ್ನು ಹೊರತುಪಡಿಸಿ, ಬಯಲುಸೀಮೆ ಪ್ರದೇಶದ ಅಭಿವೃದ್ಧಿಗಾಗಿ ಮಂಡಲಿಯು ಸಿದ್ಧಪಡಿಸಿದ ವಾರ್ಷಿಕ ಯೋಜನೆ;

(ಎಚ್) "ಕಾರ್ಯದರ್ಶಿ" ಎಂದರೆ, ಮಂಡಲಿಯ ಕಾರ್ಯದರ್ಶಿ.

## ಅಧ್ಯಾಯ II

**3. ಮಂಡಲಿಯ ರಚನೆ.-** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಸಾಧ್ಯವಾದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಚಿತ್ರದುರ್ಗದಲ್ಲಿ ಕೇಂದ್ರ ಕಛೇರಿ ಇರುವ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಎಂದು ಕರೆಯಲಾಗುವ ಒಂದು ಮಂಡಲಿಯನ್ನು ಬಯಲುಸೀಮೆ ಪ್ರದೇಶಕ್ಕಾಗಿ ಸ್ಥಾಪಿಸತಕ್ಕದ್ದು.

(2) ಮಂಡಲಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಬಯಲುಸೀಮೆ ಪ್ರದೇಶವನ್ನು ಭಾಗಶಃ ಅಥವಾ ಪೂರ್ಣವಾಗಿ ಪ್ರತಿನಿಧಿಸುವ ಮಂಡಲಿಯ ಅಧಿಕಾರ ವ್ಯಾಪ್ತಿಯೊಳಗೆ ತಮ್ಮ ಚುನಾವಣಾ ಕ್ಷೇತ್ರಗಳನ್ನು ಹೊಂದಿರುವ ಸಂಸತ್ತಿನ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು;

(ಬಿ) ಬಯಲುಸೀಮೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪಂಚಾಯತ್ ಅಧ್ಯಕ್ಷರು;

(ಸಿ) ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಹತ್ತು ಮಂದಿಯನ್ನು ಮೀರದ ಸದಸ್ಯರು, ಅವರ ಪೈಕಿ ಇಬ್ಬರು ಅನುಸೂಚಿತ ಜಾತಿಗಳು ಮತ್ತು ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಾಗಿರತಕ್ಕದ್ದು;

(ಡಿ) ಬಯಲು ಸೀಮೆಯ ಪ್ರತಿಯೊಂದು ವಿಭಾಗದ ವಿಭಾಗೀಯ ಕಮೀಷನರು;

(ಇ) ಮಂಡಲಿಯ ಕಾರ್ಯದರ್ಶಿ; ಮತ್ತು

(ಎಫ್) ಬಯಲು ಸೀಮೆಯ ಪ್ರದೇಶದಲ್ಲಿನ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರು.

(4) ರಾಜ್ಯ ಸರ್ಕಾರವು, ಸದಸ್ಯರ ಪೈಕಿ ಒಬ್ಬರನ್ನು ಮಂಡಲಿಯ ಅಧ್ಯಕ್ಷರನ್ನಾಗಿ ನೇಮಿಸತಕ್ಕದ್ದು.

(5) ರಾಜ್ಯ ಸರ್ಕಾರವು ವಿಭಾಗೀಯ ಕಮಿಶನರ್ ದರ್ಜೆಗೆ ಕೆಳಗಿನದಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಮಂಡಲಿಯ ಕಾರ್ಯದರ್ಶಿಯನ್ನಾಗಿ ಸಹ ನೇಮಿಸತಕ್ಕದ್ದು.

(6) ರಾಜ್ಯ ಸರ್ಕಾರವು ಈ ಅಧಿನಿಯಮದ ಅಡಿಯಲ್ಲಿ ಮಂಡಲಿಯ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಅವಶ್ಯಕವೆಂದು ತಾನು ಪರಿಗಣಿಸುವ ಅಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ಮಂಡಲಿಗೆ ಒದಗಿಸತಕ್ಕದ್ದು.

(7) ಮಂಡಲಿಯ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯವಾಗಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಮಂಡಲಿಯ ಆಡಳಿತಾತ್ಮಕ ವೆಚ್ಚಗಳನ್ನು ಮಂಡಲಿಯ ನಿಧಿಯ ಪೈಕಿಯಿಂದ ಭರಿಸತಕ್ಕದ್ದು.

**4. ಪದಾವಧಿ ಮತ್ತು ಸೇವಾ ಷರತ್ತುಗಳು.-** (1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ರಾಜ್ಯ ಸರ್ಕಾರದಿಂದ ನೇಮಿತರಾದ ಅಧ್ಯಕ್ಷರು ಮತ್ತು ಇತರ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಅಧ್ಯಕ್ಷರು ಅಥವಾ ಸರ್ಕಾರಿ ಸದಸ್ಯನಲ್ಲದ ಒಬ್ಬ ಸದಸ್ಯನು, ತನ್ನ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು ಆದರೆ ತನ್ನ ರಾಜೀನಾಮೆಯು ಅಂಗೀಕಾರವಾಗುವವರೆಗೆ ಹುದ್ದೆಯಲ್ಲಿ ಮುಂದುವರೆಯತಕ್ಕದ್ದು.

(3) ಅಧ್ಯಕ್ಷರು ಮತ್ತು ಇತರ ಸದಸ್ಯರು ನಿಯಮಿಸಬಹುದಾದ ಅಂಥ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

(4) ಅಧ್ಯಕ್ಷರು ಮತ್ತು ಇತರ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಮಂಡಲಿಯ ನಿಧಿಯಿಂದ ಭರಿಸತಕ್ಕದ್ದು.

(5) ಮಂಡಲಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಮಂಡಲಿಯಲ್ಲಿ ಯಾವುದೇ ರಿಕ್ತ ಸ್ಥಾನವು ಇರುವುದೆಂಬ ಅಥವಾ ಮಂಡಲಿಯ ರಚನೆಯಲ್ಲಿ ದೋಷವಿದೆಯೆಂಬ ಕಾರಣಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

**5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.-** (1) ಒಬ್ಬ ವ್ಯಕ್ತಿಯು, ಅವನು.-

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ದೋಷಸಿದ್ಧಿಯಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥ ಚಿತ್ತದವನಾಗಿದ್ದು ಆ ಬಗ್ಗೆ ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದು ಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ; ಅಥವಾ

(ಇ) ಮಂಡಲಿಯ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ

ಮಂಡಲಿಯೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ;

(ಎಫ್) ಮಂಡಲಿಯ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮಂಡಲಿಯ ವಿರುದ್ಧವಾಗಿ ನ್ಯಾಯವಾದಿಯಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

-ಸದಸ್ಯನಾಗಿ ನೇಮಿತನಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಅನರ್ಹನಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು ಮಂಡಲಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸಲಾದ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (1)ನೇ ಉಪ-ಪ್ರಕರಣದ (ಇ) ಖಂಡದ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

**6. ಸದಸ್ಯನನ್ನು ತೆಗೆದುಹಾಕುವುದು.-** (1) ಸರ್ಕಾರವು, ಅಧ್ಯಕ್ಷ ಅಥವಾ ಇತರ ಸದಸ್ಯನನ್ನು, ಅವನು,-

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುವೇ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಅಧ್ಯಕ್ಷ ಅಥವಾ ಸದಸ್ಯನನ್ನು, ಅವನು ಆ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ, ಆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರುಹಾಜರಾಗಲು ಮಂಡಲಿಯಿಂದ ಅನುಮತಿ ಪಡೆಯದೆ ಮಂಡಲಿಯ ಮೂರು ನಿರಂತರ ಸಭೆಗಳಿಗೆ ಅವನು ಗೈರುಹಾಜರಾದರೆ; ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ತನ್ನ ಸ್ಥಾನವನ್ನು ಅವನು ದುರುಪಯೋಗಪಡಿಸಿಕೊಂಡಿದ್ದು, ಅವನನ್ನು ಆ ಪದದಲ್ಲಿ ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕವುಂಟಾಗುವುದೆಂದು ಕಂಡುಬಂದರೆ:

ಪರಂತು, ಯಾವೊಬ್ಬ ಸದಸ್ಯನನ್ನು ಅವನಿಗೆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಅಡಿಯಲ್ಲಿ ತೆಗೆದುಹಾಕತಕ್ಕದ್ದಲ್ಲ;

-ತೆಗೆದುಹಾಕತಕ್ಕದ್ದು.

**7. ಕಾರ್ಯದರ್ಶಿ.-** (1) ಕಾರ್ಯದರ್ಶಿಯು, ರಾಜ್ಯ ಸರ್ಕಾರವು ಆಗಿಂದಾಗ್ಗೆ ನಿರ್ಧರಿಸಬಹುದಾದ ಅಂಥ ವೇತನ ಮತ್ತು ಇತರ ಭತ್ಯೆಗಳನ್ನು ಪಡೆಯತಕ್ಕದ್ದು.

(2) ರಾಜ್ಯ ಸರ್ಕಾರವು, ಕಾರ್ಯದರ್ಶಿಗೆ ಆಗಿಂದಾಗ್ಗೆ ಗೈರುಹಾಜರಿಗೆ ಅನುಮತಿ ನೀಡಬಹುದು.

(3) ಕಾರ್ಯದರ್ಶಿಯು, ಮಂಡಲಿಯ ಮುಖ್ಯ ಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ,-

(ಎ) ಮಂಡಲಿಯಿಂದ ಅನುಮೋದಿತವಾದ ಯೋಜನೆಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕದ್ದು;

(ಬಿ) ಮಂಡಲಿಯ ನಿಧಿಯನ್ನು ನಿರ್ವಹಿಸತಕ್ಕದ್ದು;

(ಸಿ) ಮಂಡಲಿಯ ಲೆಕ್ಕಪತ್ರಗಳನ್ನು ನಿರ್ವಹಿಸುವಂತೆ ಮಾಡತಕ್ಕದ್ದು ಮತ್ತು,-

(ಡಿ) ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅವನಿಗೆ ಪ್ರದಾನ ಮಾಡಲಾಗುವ ಇತರ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**8. ಮಂಡಲಿಯ ಸಭೆಗಳು.-** (1) ಮಂಡಲಿಯ ಸಭೆಗಳನ್ನು ಅಧ್ಯಕ್ಷ ಅಥವಾ ಅಧ್ಯಕ್ಷನ ಪೂರ್ವಾನುಮೋದನೆಯೊಂದಿಗೆ ಕಾರ್ಯದರ್ಶಿಯು ಕರೆಯತಕ್ಕದ್ದು ಮತ್ತು ಮಂಡಲಿಯ ಅಧಿಕಾರವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಅಥವಾ ರಾಜ್ಯದ ಕೇಂದ್ರ ಕಾರ್ಯಸ್ಥಾನದಲ್ಲಿ ನಡೆಸತಕ್ಕದ್ದು.

(2) ಮಂಡಲಿಯು ಕಡೇ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅಧ್ಯಕ್ಷ ತಾನು ಅವಶ್ಯವೆಂದು ಭಾವಿಸಿದರೆ ವಿಶೇಷ ಸಭೆಯನ್ನು ಕರೆಯಬಹುದು ಅಥವಾ ಅಧ್ಯಕ್ಷನ ಪೂರ್ವಾನುಮೋದನೆಯೊಂದಿಗೆ ಕಾರ್ಯದರ್ಶಿಯು ಅಂಥ ಸಭೆಯನ್ನು ಕರೆಯಬಹುದು. ಅಂಥ ಸಭೆಯನ್ನು ಮಂಡಲಿಯ ಅಧಿಕಾರವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಅಥವಾ ರಾಜ್ಯದ ಕೇಂದ್ರ ಕಾರ್ಯಸ್ಥಾನದಲ್ಲಿ ನಡೆಸತಕ್ಕದ್ದು:

[1][ಪರಂತು, ಅಧ್ಯಕ್ಷರ ಹುದ್ದೆ ಖಾಲಿ ಇದ್ದಲ್ಲಿ, ಕಾರ್ಯದರ್ಶಿಯು ಯಾವುದೇ ತುರ್ತು ವಿಷಯದ ಚರ್ಚೆಗಾಗಿ ಮಂಡಲಿಯ ಸಭೆಯನ್ನು ಕರೆಸಬಹುದು.][1]

1. 2000ದ ಅಧಿನಿಯಮ 16ರ ಮೂಲಕ ದಿ:6.11.2001ರಿಂದ ಅದಿಸೂಚನೆಯ ಮೂಲಕ ಸೇರಿಸಲಾಗಿದೆ.

(4) ಮಂಡಲಿಯು ತನ್ನ ಸಭೆಗಳಲ್ಲಿ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(5) ಪ್ರತಿಯೊಂದು ಸಭೆಯಲ್ಲಿಯೂ, ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ ಯಾವುದೇ ಸಭೆಗೆ ಹಾಜರಾಗಲು ಅಧ್ಯಕ್ಷರು ಅಸಮರ್ಥರಾದರೆ [1][ಅಥವಾ ಅಧ್ಯಕ್ಷರ ಹುದ್ದೆಯು ಖಾಲಿ ಇದ್ದರೆ][1], ಸಭೆಯಲ್ಲಿ ಹಾಜರಿರುವ ಸದಸ್ಯರು ಆಯ್ಕೆ ಮಾಡುವ ಯಾವೊಬ್ಬ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(6) ಇಪ್ಪತ್ತು ಮಂದಿ ಸದಸ್ಯರಿಂದ ಕೋರಂ ಆಗತಕ್ಕದ್ದು.

**9. ವ್ಯವಹರಣೆಗಳು ಸರಿಯಾದುವೆಂದು ಮತ್ತು ಊರ್ಜಿತವಾದುವೆಂದು ಪೂರ್ವ ಭಾವನೆ ಮಾಡುವುದು.-** ಅಧ್ಯಕ್ಷರಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯ ಅನರ್ಹತೆ ಅಥವಾ ನೇಮಕಾತಿಯಲ್ಲಿನ ಲೋಪವು, ಮಂಡಲಿಯ ಅಂಥ ಕೃತ್ಯ ಅಥವಾ ವ್ಯವಹರಣೆಯು, ಅನ್ಯಥಾ ಈ ಅಧಿನಿಯಮದ

ಉಪಬಂಧಗಳಿಗನುಸಾರವಾಗಿದ್ದರೆ, ಮಂಡಲಿಯ ಯಾವುದೇ ಕೃತ್ಯ ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**10. ಅನುಷ್ಠಾನ ಸಮತಿ.–** ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಅನುಷ್ಠಾನ ಸಮಿತಿಯಿರತಕ್ಕದ್ದು, ಎಂದರೆ:–

(ಎ) ಮಂಡಲಿಯ ಕಾರ್ಯದರ್ಶಿ ಅವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಬಯಲುಸೀಮೆ ಪ್ರದೇಶದಲ್ಲಿನ ಪ್ರತಿಯೊಂದು ಜಿಲ್ಲೆಯ ಡೆಪ್ಯುಟಿ ಕಮೀಷನರ್;

(ಸಿ) ಬಯಲುಸೀಮೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು;

(ಡಿ) ತೋಟಗಾರಿಕೆ ಇಲಾಖೆಯ ನಿರ್ದೇಶಕರು;

(ಇ) ಕೃಷಿ ಇಲಾಖೆಯ ನಿರ್ದೇಶಕರು;

(ಎಫ್) ರೇಷ್ಮೆ ಇಲಾಖೆಯ ನಿರ್ದೇಶಕರು;

(ಜಿ) ಪಶುಸಂಗೋಪನೆ ಮತ್ತು ಪಶು ವೈದ್ಯ ವಿಜ್ಞಾನ ಇಲಾಖೆಯ ನಿರ್ದೇಶಕರು;

(ಹೆಚ್) ರಾಜ್ಯ ಜಲಾನಯನ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಇಲಾಖೆಯ ನಿರ್ದೇಶಕರು;

(ಐ) ಸಣ್ಣ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರು;

(ಜೆ) ಬಯಲುಸೀಮೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮುಖ್ಯ ಇಂಜಿನಿಯರುಗಳು;

(ಕೆ) ಬಯಲುಸೀಮೆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿ;

(ಎಲ್) ಕರ್ನಾಟಕ ರಾಜ್ಯ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ ಅಧಿನಿಯಮ, 1963ರ ಮೇರೆಗೆ ಸ್ಥಾಪಿಸಲಾದ ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿ;

(ಎಂ) ರಾಜ್ಯ ಸರ್ಕಾರದಿಂದ ನೇಮಿಸಬಹುದಾದಂಥ ಇತರ ಅಧಿಕಾರಿಗಳು.

**11. ಅನುಷ್ಠಾನ ಸಮಿತಿಯ ಅಧಿಕಾರಗಳು.–** (1) ಅನುಷ್ಠಾನ ಸಮಿತಿಯು ಮಂಡಲಿಯಿಂದ ತನಗೆ ಪ್ರತ್ಯಾಯೋಜಿಸಲಾದ ಮಂಡಲಿಯ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅನುಷ್ಠಾನ ಸಮಿತಿಯು, ಕಡೇ ಪಕ್ಷ ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅನುಷ್ಠಾನ ಸಮಿತಿಯು, ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳ ಸಂಬಂಧದಲ್ಲಿ ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ –III

**12. ಮಂಡಲಿಯ ಉದ್ದೇಶಗಳು.–** ಮಂಡಲಿಯ ಉದ್ದೇಶಗಳು ಈ ಮುಂದಿನಂತಿರತಕ್ಕದ್ದು.–

(i) ಬಯಲು ಸೀಮೆಯಲ್ಲಿ ಜಲಮೂಲಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಪ್ರೋತ್ಸಾಹ ನೀಡುವುದು;

(ii) ಬಯಲು ಸೀಮೆಯ ಮಳೆ ಆಧಾರಿತ ಕೃಷಿ ಪದ್ಧತಿಗಳಲ್ಲಿ ಭೂಸಾರ ಮತ್ತು ಜಲ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು;

(iii) ಬಯಲು ಸೀಮೆಯಲ್ಲಿ ಅರಣ್ಯಾಭಿವೃದ್ಧಿಗೆ ಉತ್ತೇಜನ ನೀಡುವುದು;

(iv) ಬಯಲು ಸೀಮೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು;

(v) ಬಯಲು ಸೀಮೆಯಲ್ಲಿ ಕೃಷಿ ಮತ್ತು ತತ್ಸಂಬಂಧಿ ವಲಯಗಳಲ್ಲಿನ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ನೆರವು ನೀಡುವುದು.

(vi) ಬಯಲುಸೀಮೆ ಪ್ರದೇಶದಲ್ಲಿ ಪಶುಸಂಗೋಪನೆಗೆ ಉತ್ತೇಜನ ನೀಡುವುದು.

**13. ಯೋಜನೆಯ ಸಿದ್ಧತೆ ಮತ್ತು ಸ್ಕೀಮುಗಳ ಅನುಮೋದನೆ.–** (1) ಮಂಡಲಿಯು ಬಯಲುಸೀಮೆ ಪ್ರದೇಶದ ಅಭಿವೃದ್ಧಿಗಾಗಿ ಪ್ರತಿವರ್ಷವೂ ಒಂದು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಯೋಜನೆಯನ್ನು ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟು ಇಲ್ಲದೆಯೇ ಅನುಮೋದಿಸಬಹುದು.

(2) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಬಯಲುಸೀಮೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿವೃದ್ಧಿ ಇಲಾಖೆಗಳು ಮತ್ತು ಜಿಲ್ಲಾ ಪಂಚಾಯತ್‌ಗಳು ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳು ಯೋಜನೆಗಳಿನುಸಾರವಾಗಿ ರೂಪಿಸಿದ ಸ್ಕೀಮುಗಳನ್ನು ಮಂಡಲಿಯು ಅನುಮೋದಿಸತಕ್ಕದ್ದು.

**14. ಉಸ್ತುವಾರಿ.–** ಯೋಜನೆಯ ಮೇರೆಗೆ ವಹಿಸಲಾದ ವೆಚ್ಚವನ್ನು ಪುನರವಲೋಕಿಸುವ ಮತ್ತು ಯೋಜನೆಗೆ ಸಂಬಂಧಪಟ್ಟಂತೆ ಬಯಲುಸೀಮೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಭಿವೃದ್ಧಿ ಇಲಾಖೆಗಳು, ಜಿಲ್ಲಾ ಪಂಚಾಯತ್‌ಗಳು ಮತ್ತು ಮಂಡಲಿಯಿಂದ ಮಾನ್ಯತೆಪಡೆದ ಸರ್ಕಾರೇತರ ಸಂಸ್ಥೆಗಳ ಕಾರ್ಯನಿರ್ವಹಣೆಯ ಪ್ರಗತಿಯನ್ನು ಉಸ್ತುವಾರಿ ಮಾಡುವ ಅಧಿಕಾರ ಮಂಡಲಿಗೆ ಇರತಕ್ಕದ್ದು.

**15. ಸಮನ್ವಯ.–** ಮಂಡಲಿಯು, ಅದರ ಯೋಜನೆಯಲ್ಲಿ ಒಳಗೊಂಡಿರುವ ಅಭಿವೃದ್ಧಿ ಯೋಜನೆಗಳನ್ನು ಬಯಲುಸೀಮೆ ಪ್ರದೇಶದಲ್ಲಿ ಅನುಷ್ಠಾನಗೊಳಿಸುವ ಎಲ್ಲ ಅಭಿವೃದ್ಧಿ ಇಲಾಖೆಗಳ, ಜಿಲ್ಲಾ ಪಂಚಾಯತ್‌ಗಳ ಮತ್ತು ಮಂಡಳಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅಂಥ ಅಭಿವೃದ್ಧಿ ಇಲಾಖೆಗಳು, ಜಿಲ್ಲಾ ಪಂಚಾಯತಿಗಳ ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿ ಸ್ಥಿತಿಯನ್ನು ಸಹ ಪುನರವಲೋಕಿಸತಕ್ಕದ್ದು ಮತ್ತು ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಗಳನ್ನು ನೀಡಬಹುದು.

**16. ಯೋಜನೆಗಳ ಅನುಷ್ಠಾನ.–** ಬಯಲುಸೀಮೆ ಪ್ರದೇಶದೊಳಗೆ ಕಾರ್ಯ ನಿರ್ವಹಿಸುತ್ತಿರುವ ಅಭಿವೃದ್ಧಿ ಇಲಾಖೆಗಳ, ಜಿಲ್ಲಾ ಪಂಚಾಯತಿಗಳ ಮತ್ತು ಮಂಡಲಿಯಿಂದ ಮಾನ್ಯತೆ ಪಡೆದ ಸರ್ಕಾರೇತರ ಸಂಸ್ಥೆಗಳ ಮೂಲಕ ವಾರ್ಷಿಕ ಯೋಜನೆ ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಲಾದ ಯೋಜನೆಗಳ ಅನುಷ್ಠಾನಕ್ಕೆ ಮಂಡಲಿಯು ಹೊಣೆಯಾಗಿರತಕ್ಕದ್ದು. ಯಾವುದೇ ಕಾರಣಕ್ಕಾಗಿ ಒಂದು ಅಭಿವೃದ್ಧಿ ಇಲಾಖೆಯು ಯೋಜನೆಯ ಅಡಿಯಲ್ಲಿ ತನಗೆ ಹಂಚಿಕೆ ಮಾಡಲಾದ ಮೊಬಲಗಿನ ಪೈಕಿಯಿಂದ ಪೂರ್ಣ ವೆಚ್ಚವನ್ನು ಭರಿಸುವ ಸಂಭವವಿಲ್ಲದಿದ್ದರೆ ಮಂಡಲಿಯು ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಧಿಗಳ ಪುನರ್ವಿನಿಯೋಗಗಳನ್ನು ಮಾಡಬಹುದು.

**17. ಮಾಹಿತಿಯನ್ನು ಪಡೆಯುವುದು.–** ಮಂಡಲಿಯು, ಈ ಅಧಿನಿಯಮದ ಉದ್ದೇಶಗಳಿಗಾಗಿ ಬಯಲು ಸೀಮೆ ಪ್ರದೇಶದಲ್ಲಿಯ ಯಾವುವೇ ಜಿಲ್ಲಾ ಪಂಚಾಯತಿಗಳಿಂದ ಅಥವಾ ಬಯಲುಸೀಮೆ ಪ್ರದೇಶದಲ್ಲಿಯ ಯಾವುದೇ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿಯಿಂದ ಮಾಹಿತಿಯನ್ನು ಕೋರಿ ಪಡೆಯಬಹುದು ಮತ್ತು ಮಂಡಲಿಯು ಕೋರಿದ ಮಾಹಿತಿಯನ್ನು ಒದಗಿಸಲು ಅಂಥ ಜಿಲ್ಲಾ ಪಂಚಾಯತ್ ಅಥವಾ ಅಧಿಕಾರಿಯು ಬದ್ಧನಾಗಿರತಕ್ಕದ್ದು.

**18. ಅಧಿಕಾರದ ಪ್ರತ್ಯಾಯೋಜನೆ.–** ಮಂಡಲಿಯು 29ನೇ ಪ್ರಕರಣದ ಅಡಿಯಲ್ಲಿ ವಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಯಾವುವೇ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ, ಅನುಷ್ಠಾನ ಸಮಿತಿಗೆ ಅಥವಾ ಮಂಡಲಿಯ ಕಾರ್ಯದರ್ಶಿಗೆ ಪ್ರತ್ಯಾಯೋಜಿಸಬಹುದು.

## ಅಧ್ಯಾಯ –IV

**19. ಮಂಡಲಿಯ ನಿಧಿ.–** (1) ಮಂಡಲಿಯು ಮಂಡಲಿಯ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಹೊಂದಿರತಕ್ಕದ್ದು.

(2) ಈ ಮುಂದಿನವುಗಳು ಮಂಡಲಿಯ ನಿಧಿಯ ಭಾಗವಾಗತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗತಕ್ಕದ್ದು ಎಂದರೆ:–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾಗಿರುವ ಅಥವಾ ನಿಗಮಿತವಾಗಿಲ್ಲದಿರುವ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯಗಳು, ದೇಣಿಗೆಗಳು ಮತ್ತು ದಾನಗಳು;

(ii) ಮಂಡಲಿಯು ಸಾಲವಾಗಿ ಪಡೆದ ಮೊಬಲಗು; ಮತ್ತು

(iii) ಯಾವುದೇ ಮೂಲದಿಂದಾಗಲಿ ಮಂಡಲಿಯಿಂದ ಅಥವಾ ಮಂಡಲಿಯ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು.

(3) ರಾಜ್ಯ ಸರ್ಕಾರದಿಂದ ಅನ್ಯಥಾ ನಿರ್ದೇಶಿತವಾಗಿದ್ದ ಹೊರತು, ನಿಧಿಗೆ ಜಮೆಯಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೊಡಗಿಸತಕ್ಕದ್ದು.

**20. ನಿಧಿಯ ವಿನಿಯೋಗ.-** ಮಂಡಲಿಯ ನಿಧಿ ಮತ್ತು ಮಂಡಲಿಯು ಹೊಂದಿರುವ ಅಥವಾ ಅದರಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತನ್ನು ಈ ಅಧಿನಿಯಮದ ನೆರವೇರಿಕೆಗಾಗಿ ವಿನಿಯೋಗಿಸತಕ್ಕದ್ದು:

ಪರಂತು, ಶೇಕಡ ಅರವತ್ತಕ್ಕೆ ಕಡಿಮೆ ಇಲ್ಲದಂಥ ನಿಧಿಯ ಭಾಗವನ್ನು 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಮಂಡಲಿಯ ಉದ್ದೇಶಗಳನ್ನು ಅನುಷ್ಠಾನಗೊಳಿಸಲು ಬಳಸತಕ್ಕದ್ದು.

**21. ಯೋಜನೆಯಲ್ಲಿ ಹಂಚಿಕೆ.-** ರಾಜ್ಯ ಸರ್ಕಾರವು ಮಂಡಲಿಯ ಯೋಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ರಾಜ್ಯದ ವಾರ್ಷಿಕ ಯೋಜನೆಯಲ್ಲಿ ಮಂಡಲಿಗೆ ಹಣಕಾಸು ಹಂಚಿಕೆಯನ್ನು ಮಾಡತಕ್ಕದ್ದು.

**22. ರಾಜ್ಯ ಸರ್ಕಾರದಿಂದ ಅನುದಾನ.-** ರಾಜ್ಯ ಸರ್ಕಾರವು ಪ್ರತಿ ವರ್ಷ ಮಂಡಲಿಗೆ ಮಂಡಲಿಯ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾದ ಮೊತ್ತದ ಅನುದಾನವನ್ನು ನೀಡತಕ್ಕದ್ದು.

**23. ಸಾಲ ಪಡೆಯಲು ಅಧಿಕಾರ.-** ಮಂಡಲಿಯು ಆಗಿಂದಾಗ್ಗೆ, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಂದ ಮತ್ತು ಈ ಬಗ್ಗೆ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗೆ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

**24. ಲೆಕ್ಕಪತ್ರ ಮತ್ತು ಲೆಕ್ಕ ಪರಿಶೋಧನೆ.-** (1) ಮಂಡಲಿಯ ನಿಧಿಯ ವರಮಾನದ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಮಂಡಲಿಯು, ನಿಯಮಿಸಬಹುದಾದ ಅಂಥ ಪ್ರಪತ್ರದಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಸಿದ್ಧಪಡಿಸತಕ್ಕದ್ದು.

(3) ಮಂಡಲಿಯ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ರಾಜ್ಯ ಸರ್ಕಾರವು ನೇಮಿಸಬಹುದಾದ ಅಂಥ ಲೆಕ್ಕಪರಿಶೋಧಕನು ಮಾಡತಕ್ಕದ್ದು.

(4) ಲೆಕ್ಕಪರಿಶೋಧಕನಿಗೆ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಮಂಡಲಿಯ ಎಲ್ಲ ಲೆಕ್ಕ ಪತ್ರಗಳು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(5) ಮಂಡಲಿಯು ಲೆಕ್ಕಪರಿಶೋಧನೆಗೆ ನಿಯಮಿಸಬಹುದಾದ ಅಂಥ ಚಾರ್ಜುಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಮಂಡಲಿಯು, ಲೆಕ್ಕಪರಿಶೋಧಕನಿಂದ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣೆಯ ಒಂದು ಪ್ರತಿಯನ್ನು ಲೆಕ್ಕ ಪರಿಶೋಧಕನ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯು ಪ್ರಕಟವಾಗುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ, ಮಂಡಲಿಗೆ ತಾನು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಮಂಡಲಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**25. ವರದಿ.-** ಮಂಡಲಿಯು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮುಂಚೆ ಅಂಥ ಪ್ರಪತ್ರದಲ್ಲಿ ಮತ್ತು ಅಂಥ ಅವಧಿಯ ಅಂತರದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮಿಸಲಾದ ವರದಿಯನ್ನು ಸಲ್ಲಿಸತಕ್ಕದ್ದು.

**26. ಮಂಡಲಿಯ ಆಯವ್ಯಯ ಪತ್ರ.-** ಮಂಡಲಿಯು ಪ್ರತಿವರ್ಷ ಮುಂಬರುವ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ವರಮಾನ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ನಿಯಮಿಸಿದ ಅಂಥ ದಿನಾಂಕಕ್ಕೆ ಮುಂಚೆ ಮತ್ತು ಅಂಥ ಪ್ರಪತ್ರದಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**27. ಮಂಡಲಿಗೆ ನಿರ್ದೇಶನ ನೀಡಲು ಸರ್ಕಾರದ ಅಧಿಕಾರ.-** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ರಾಜ್ಯ ಸರ್ಕಾರವು ಅವಶ್ಯವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶಗಳನ್ನು ನೀಡುವುದು ಯುಕ್ತವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಅದು ಹಾಗೆ ನಿರ್ದೇಶನಗಳನ್ನು ನೀಡಬಹುದು. ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

**28. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಪೂರ್ವ ಪ್ರಕಟಣೆಯ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಲಾದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮೊದಲು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ನಿಯಮವು ತದನಂತರ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಏರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**29. ವಿನಿಯಮಗಳನ್ನು ರಚಿಸಲು ಮಂಡಲಿಗೆ ಅಧಿಕಾರ.-** ಮಂಡಲಿಯು ಈ ಅಧಿನಿಯಮದ ಉಪಬಂಧಗಳು ಮತ್ತು 28ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಂದ ಈ ಅಧಿನಿಯಮದ ಉದ್ದೇಶಗಳ ನೆರವೇರಿಕೆಗಾಗಿ ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

**ಅನುಸೂಚಿ**

**(2(ಎ) ಪ್ರಕರಣ ನೋಡಿ)**

| ಕ್ರಮ ಸಂಖ್ಯೆ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|
| 1 | 2 | 3 |
| 1. | ಬೆಂಗಳೂರು (ಗ್ರಾಮೀಣ) | 1. ಚನ್ನಪಟ್ಟಣ |
| | | 2. ದೇವನಹಳ್ಳಿ |
| | | 3. ಕನಕಪುರ |
| | | 4. ರಾಮನಗರ |
| | | 5. ದೊಡ್ಡಬಳ್ಳಾಪುರ |
| | | 6. ನೆಲಮಂಗಲ |
| | | 7. ಹೊಸಕೋಟೆ |
| | | 8. ಮಾಗಡಿ |
| 2. | ತುಮಕೂರು | 9. ಚಿಕ್ಕನಾಯಕನಹಳ್ಳಿ |

| | | |
|---|---|---|
| | | 1೦. ಕೊರಟಗೆರೆ |
| | | 11. ಕುಣಿಗಲ್ |
| | | 12. ಪಾವಗಡ |
| | | 13. ತಿಪಟೂರು |
| | | 14. ತುರುವೇಕೆರೆ |
| | | 15. ಮಧುಗಿರಿ |
| | | 16. ಗುಬ್ಬಿ |
| | | 17. ತುಮಕೂರು |
| | | 18. ಶಿರಾ |
| 3. | ಕೋಲಾರ | 19. ಮುಳಬಾಗಿಲು |
| | | 2೦. ಬಾಗೇಪಲ್ಲಿ |
| | | 21. ಚಿಕ್ಕಬಳ್ಳಾಪುರ |
| | | 22. ಚಿಂತಾಮಣಿ |
| | | 23. ಮಾಲೂರು |
| | | 24. ಶ್ರೀನಿವಾಸಪುರ |
| | | 25. ಶಿಡ್ಲಘಟ್ಟ |
| | | 26. ಗುಡಿಬಂಡೆ |
| | | 27. ಕೋಲಾರ |
| | | 28. ಬಂಗಾರಪೇಟೆ |
| 4. | ಹಾಸನ | 29. ಅರಸೀಕೆರೆ |
| 5. | ಚಿತ್ರದುರ್ಗ | 3೦. ಚಳ್ಳಕೆರೆ |
| | | 31. ಚಿತ್ರದುರ್ಗ |
| | | 32. ಹೊಳಲ್ಕೆರೆ |
| | | 33. ಹೊಸದುರ್ಗ |
| | | [1][34. XXX][1] |
| | | 35. ಮೊಳಕಾಲ್ಮೂರು |
| | | 36. ಹಿರಿಯೂರು |
| 6. | ಧಾರವಾಡ | 37. ಹುಬ್ಬಳ್ಳಿ |
| | | [1][38. XXX][1] |
| | | 39. ಕುಂದಗೋಳ |
| | | [1][4೦, 41, 42, 43, 44. XXX][1] |
| 7. | ಬೆಳಗಾಂ | 45. ಚಿಕ್ಕೋಡಿ |
| | | 46. ಅಥಣಿ |
| | | 47. ರಾಮದುರ್ಗ |

| | | |
|---|---|---|
| | | 48. ಗೋಕಾಕ್ |
| 8. | ಬಿಜಾಪುರ | [1][49, ೫೦. xxx][1] |
| | | 51. ಬಸವನಬಾಗೇವಾಡಿ |
| | | [1][52, 53. xxx][1] |
| | | 54. ಮುದ್ದೇಬಿಹಾಳ್ |
| | | 55. ಬಿಜಾಪುರ |
| | | 56. ಇಂಡಿ |
| | | 57. ಸಿಂದಗಿ |
| [2][9. | ದಾವಣಗೆರೆ | 58. ಜಗಳೂರು |
| ೧೦. | ಹಾವೇರಿ | 59. ಹಾವೇರಿ |
| | | ೬೦. ರಾಣೆಬೆನ್ನೂರು |
| 11. | ಗದಗ | 61. ಗದಗ |
| | | 62. ಶಿರಹಟ್ಟಿ |
| | | 63. ಮುಂಡರಗಿ |
| | | 64. ರೋಣ |
| 12. | ಬಾಗಲಕೋಟೆ | 65. ಬಾಗಲಕೋಟೆ |
| | | 66. ಬಾದಾಮಿ |
| | | 67. ಬೀಳಗಿ |
| | | 68. ಹುನಗುಂದ][2] |

1. ೨೦೦೦ದ ಅಧಿನಿಯಮ 16ರ ಮೂಲಕ ದಿ:6.11.೨೦೦1ರಿಂದ ಅದಿಸೂಚನೆಯ ಮೂಲಕ ಬಿಟ್ಟುಬಿಡಲಾಗಿದೆ.

**2.** ೨೦೦೦ದ ಅಧಿನಿಯಮ 16ರ ಮೂಲಕ ದಿ:6.11.೨೦೦1ರಿಂದ ಅದಿಸೂಚನೆಯ ಮೂಲಕ ಸೇರಿಸಲಾಗಿದೆ.

* * **

**ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ, 1994** ನ್ನು ಈ ಕೆಳಕಂಡ ಅಧಿನಿಯಮಗಳ ಮೂಲಕ ತಿದ್ದುಪಡಿ ಮಾಡಲಾಗಿದೆ. ಅವುಗಳೆಂದರೆ,–

**ತಿದ್ದುಪಡಿಗಳು (ಕಾಲಾನುಕ್ರಮ)**

| **ಕ್ರಮ ಸಂಖ್ಯೆ** | **ಅಧಿನಿಯಮದ ಸಂಖ್ಯೆ ಮತ್ತು ವರ್ಷ** | **ತಿದ್ದುಪಡಿಯಾದ ಪ್ರಕರಣಗಳು** | **ಷರಾ** |
|---|---|---|---|
| 1 | 1994ರ ಕರ್ನಾಟಕ ಅಧಿನಿಯಮ ಸಂಖ್ಯೆ 38 | – | ಸದರಿ ಅಧಿನಿಯಮವು ದಿ:4.1.1995ರ ಅಧಿಸೂಚನೆ ಸಂಖ್ಯೆ ಕೃತೋಇ 176 ಕೃಯೋಕಾ 93(ಭಾ) ಮೂಲಕ ದಿ: 26.1.1995 ರಿಂದ ಜಾರಿಗೆ ಬಂದಿರುತ್ತದೆ. |

| | | | |
|---|---|---|---|
| 2 | 2000ದ ಕರ್ನಾಟಕ ಅಧಿನಿಯಮ ಸಂಖ್ಯೆ:16 | 8(3) (5),<br>ಅನುಸೂಚಿ-ಕ್ರ.ಸಂ.5(34),<br>ಕ್ರ.ಸಂ.6(38)(40)(41)(42)(43)(44),<br>ಕ್ರ.ಸಂ. 8(49)(50)(52)(53)<br>ಕ್ರ.ಸಂ. 9<br>ಕ್ರ.ಸಂ.10<br>ಕ್ರ.ಸಂ.11<br>ಕ್ರ.ಸಂ.12 | 6.11.2001 ರಿಂದ ಜಾರಿಗೆ ಬಂದಿರುತ್ತದೆ. |

**ತಿದ್ದುಪಡಿಗಳು (ಪ್ರಕರಣವಾರು)**

| ಪ್ರಕರಣಗಳು | ಅಧಿನಿಯಮದ ಸಂಖ್ಯೆ ಮತ್ತು ವರ್ಷ | ಷರಾ |
|---|---|---|
| 8(3) (5) | 2000ದ 16 | 6.11.2001 |
| ಅನುಸೂಚಿ-ಕ್ರ.ಸಂ.5(34), | 2000ದ 16 | 6.11.2001 |
| ಕ್ರ.ಸಂ.6(38)(40)(41)(42)(43)(44), | 2000ದ 16 | 6.11.2001 |
| ಕ್ರ.ಸಂ. 8(49)(50)(52)(53) | 2000ದ 16 | 6.11.2001 |
| ಕ್ರ.ಸಂ. 9 | 2000ದ 16 | 6.11.2001 |
| ಕ್ರ.ಸಂ.10 | 2000ದ 16 | 6.11.2001 |
| ಕ್ರ.ಸಂ.11 | 2000ದ 16 | 6.11.2001 |
| ಕ್ರ.ಸಂ.12 | 2000ದ 16 | 6.11.2001 |

**ಅಧಿಸೂಚನೆ**

**ಬೆಂಗಳೂರು, ದಿನಾಂಕ 4ನೇ ಜನವರಿ 1995 ಸಂಖ್ಯೆ:ಕೃತೋಇ 176 ಕೃಯೋಕಾ 93 (ಭಾ)**

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಅಧಿನಿಯಮ 1994ರ (ಕರ್ನಾಟಕ ಅಧಿನಿಯಮ 1994ರ ಸಂಖ್ಯೆ 38) ಪ್ರಕರಣ 1 ರ ಉಪ ಪ್ರಕರಣ (3) ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ ರಾಜ್ಯ ಸರ್ಕಾರವು 26ನೇ ಜನವರಿ 1995 ರಂದು ಸದರಿ ಅಧಿನಿಯಮವು ಜಾರಿಗೆ ಬರುತ್ತದೆಂದು ಗೊತ್ತುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ರಾ. ಶಿವರಾಮಯ್ಯ.**

ಸರ್ಕಾರದ ಅಧೀನ ಕಾರ್ಯದರ್ಶಿ,

ಕೃಷಿ ಮತ್ತು ತೋಟಗಾರಿಕೆ ಇಲಾಖೆ.

(ಕರ್ನಾಟಕ ರಾಜ್ಯ ಪತ್ರದ ಭಾಗ 4 ಸೆಕ್ಷನ್ 2ಸಿ (ii)(ವಿಶೇಷ ಪತ್ರಿಕೆ) ಸಂಖ್ಯೆ 53 ದಿನಾಂಕ 24-01-1995 ರಲ್ಲಿ ಪ್ರಕಟವಾಗಿದೆ)

* * * *